


## ಗುರೂಜಿ ಕೃಷ್ಣಾನಂದ (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಏಳುವಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ.
- ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ಕೊಡುಗೆಯನ್ನು ಕೊಡಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

# ಬೆಳಕಿನ ಸಂಚಲನ

ಸಂ 3, ಸಂ 6 ಅಕ್ಟೋಬರ್ 2015

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಅವರ ಜುಲೈ 5, 1998ರ ಭಾಷಣದ ಆಯ್ದ ಭಾಗಗಳು)

**ಅನು: ಶ್ರೀದೇವಿ**

ಬೆಳಕನ್ನು ಹರಡೋಣ. ನಾವು ಅದ್ಭುತವಾದ ಚೈತನ್ಯಗಳನ್ನು ಸೃಷ್ಟಿಸುತ್ತಿದ್ದೇವೆ ಹಾಗೂ ಜನರು ಮುಕ್ತ ಮನಸ್ಸಿನಿಂದ ಸ್ವೀಕರಿಸುವುದಕ್ಕೆ ಸಹಾಯ ಮಾಡುತ್ತಿದ್ದೇವೆ. ನಾವು ಅಸಾಧಾರಣ ಸೇವೆ ಮಾಡುತ್ತಿದ್ದೇವೆ ಎಂದು ಯೋಚಿಸದಿರೋಣ. ಅದು ನಮ್ಮ ಕರ್ತವ್ಯ. ದೇವರು ಲಕ್ಷಾಂತರ ರೀತಿಗಳಲ್ಲಿ ನಮಗೆ ಕೊಡುತ್ತಾನೆ. ಸಣ್ಣ–ಪುಟ್ಟ ಕಾರ್ಯಗಳಲ್ಲಿ ನಮ್ಮ ಕೃತಜ್ಞತೆಯನ್ನು ತೋರಿಸೋಣ. ಹೆಚ್ಚು ಜನರು ಸೇರಿ ಬೆಳಕನ್ನು ಹರಡುವ ದಿನವು ಬರುತ್ತದೆ. ಆಗ ಚೈತನ್ಯಗಳನ್ನು ಚಾನಲ್ ಮಾಡುವುದರ ಮೂಲಕ ಚೈತನ್ಯಗಳು ಹರಡಿ, ಚೈತನ್ಯಗಳ ವಲಯಗಳು ಬಲಗೊಂಡು, ಅನೇಕ ಅದ್ಭುತಗಳು ನಡೆಯುತ್ತವೆ. ಜಗತ್ತಿನ ಮತ್ತು ಜನರ ಎಲ್ಲ ಸಮಸ್ಯೆಗಳು ಕಣ್ಮರೆಯಾಗುವುದನ್ನು ನಾವು ನೋಡುತ್ತೇವೆ. ಎಲ್ಲ ರೋಗಗಳು ಮಾಯವಾಗುತ್ತವೆ.

ಯಾವುದೋ ಮಟ್ಟದಲ್ಲಿನ ಅಸಮತೋಲನವೇ ಅನಾರೋಗ್ಯ. ಆ ಅಸಮತೋಲನವನ್ನು ಹೋಗಲಾಡಿಸಿದಾಗ ಅನಾರೋಗ್ಯ ಮಾಯವಾಗುತ್ತದೆ.

ಎಲ್ಲಾ ಮಾನವರು ಪರಿವರ್ತನೆಗೊಂಡಾಗ, ಪ್ರಕೃತಿಯೂ ಕೂಡ ಪರಿವರ್ತನೆಗೊಳ್ಳುತ್ತದೆ. "ಭೂಕಂಪಗಳಿರುವುದಿಲ್ಲ, ಜ್ವಾಲಾಮುಖಿಗಳಿರುವುದಿಲ್ಲ. ಮುಳ್ಳುಗಳಿರುವುದಿಲ್ಲ, ವಿಷಪೂರಿತ ಗಿಡಗಳಿರುವುದಿಲ್ಲ. ಈ ಭೂಮಿಯ ಮೇಲಿನ ಇಡೀ ಜೀವನ ಬದಲಾಗುತ್ತದೆ" ಎಂದು ಅಮರರವರು ನಮಗೆ ಹೇಳುತ್ತಿದ್ದರು. ಪರಿವರ್ತನೆ ಯಾವುದೋ ಒಂದು ಭಾಗದಲ್ಲಿನ ತಾತ್ಕಾಲಿಕವಾದ ಬದಲಾವಣೆಯಲ್ಲ. ಎಲ್ಲೆಲ್ಲೂ, ಪ್ರತಿಯೊಂದೂ ಬದಲಾಗುತ್ತದೆ. ಇದು ಪ್ರತಿ ಸಲ, ಪ್ರತಿ ಕಾಲಚಕ್ರದಲ್ಲೂ ನಡೆಯುತ್ತದೆ. ಈಗಿನ ಕಾಲಚಕ್ರದಲ್ಲಿ ಕೂಡ ಇದು ನಡೆಯುತ್ತದೆ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಸದ್ದಿಲ್ಲದೆ ಹಾಗೂ ಶಾಂತಿಯುತವಾಗಿ ಮಾಡುವ ಲೈಟ್ ಚಾನಲಿಂಗ್‌ಅನ್ನು ಹೆಚ್ಚು ಶಾಲೆಗಳ ಮುಂದೆ ಇಡುವ ನಮ್ಮ ಕೆಲಸ ಮುಂದುವರೆಯುತ್ತದೆ. ಬಹುತೇಕ ಶಾಲೆಗಳು ನಾವಿಟ್ಟ ಈ ಮೊದಲ ಹೆಜ್ಜೆಗೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ ಹಾಗೂ ಲೈಟ್ ಚಾನಲಿಂಗ್‌ನ ಸಾಮರ್ಥ್ಯವನ್ನು ಅನುಭವಿಸಿದ ಕಾರಣಕ್ಕಾಗಿ ಅನೇಕ ಶಾಲೆಗಳು ಅದನ್ನು ತಮ್ಮ ನಿತ್ಯದ ಪ್ರಾರ್ಥನೆಯ ಭಾಗವನ್ನಾಗಿ ಮಾಡಿಕೊಂಡಿದ್ದಾರೆ. ಶಾಲೆಗಳ ಈ ಪ್ರತಿಕ್ರಿಯೆ ನಮ್ಮ ಕಾರ್ಯಕರ್ತರು ಹೆಚ್ಚು ಶಾಲೆಗಳನ್ನು ತಲುಪಲು ಪ್ರಮುಖ ಪ್ರೇರಣೆಯಾಗಿದೆ.

ಈಗ ನಾವು 5000ಕ್ಕೂ ಹೆಚ್ಚು ಶಾಲೆಗಳಲ್ಲಿನ 29 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಲೈಟ್ ಚಾನಲ್ ಮಾಡುವುದನ್ನು ಕಲಿಸಿದ್ದೇವೆ.

ಇಲ್ಲಿ ವ್ಯಾಪಾರೀಕರಣವಿಲ್ಲ. ಈ ಪ್ರಪಂಚವನ್ನು ಜೀವಿಸಲು ಯೋಗ್ಯವಾದ ಸ್ಥಳವನ್ನಾಗಿ ಮಾಡಬೇಕೆನ್ನುವ ಪರಿಶುದ್ಧವಾದ ಉದ್ದೇಶವಿದೆ. ಇದು ಕಾಲ್ಪನಿಕವೆನಿಸಬಹುದು, ಆದರೆ ಇದರ ಸಾಧ್ಯತೆಯನ್ನು ನಾವು ನಂಬುತ್ತೇವೆ ಹಾಗೂ ಸಾವಿರಾರು ಲೈಟ್ ಚಾನಲ್‌ಗಳ ಮತ್ತು ನಮ್ಮ ಸ್ವಂತದ ಅನುಭವಗಳು ಈ ಸಾಧ್ಯತೆಯ ಮೇಲಿನ ನಮ್ಮ ನಂಬಿಕೆಯನ್ನು ಬಲಗೊಳಿಸುವುದು ಮುಂದುವರೆಯುತ್ತದೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ಬೆಳಕು ಶಾಶ್ವತವಾದ ಪ್ರೀತಿ ಮತ್ತು ಆನಂದದ ಮೂಲ. ಈ ಮೂಲದಲ್ಲಿ ಪ್ರತಿಯೊಬ್ಬರಿಗೂ ಲಭ್ಯವಿರುವ ಅಪರಿಮಿತವಾದ ವಿವೇಕ ಮತ್ತು ಜ್ಞಾನ ಭಂಡಾರವಿದೆ. ಬೆಳಕು ಸರ್ವಶಕ್ತ ಹಾಗೂ ಸರ್ವವ್ಯಾಪಿ. ಬೆಳಕಿನ ಜೊತೆ ಸಂಪರ್ಕಗೊಂಡಿದ್ದರೆ ಜೀವನದಲ್ಲಿ ಎಲ್ಲವನ್ನೂ ನಿಭಾಯಿಸಬಹುದು. ನಾವು ಬೆಳಕನ್ನು ಹೊಂದಿದ್ದಾಗ, ನಮ್ಮ ಎಲ್ಲಾ ಸಮಸ್ಯೆಗಳು ನಿಧಾನವಾಗಿ ಮತ್ತು ಕ್ರಮಬದ್ಧವಾಗಿ ಪರಿಹಾರವಾಗುತ್ತವೆ. ಸಂಗಾತಿ ಅಥವಾ ತಂದೆತಾಯಿಯರಂತೆ, ಕಷ್ಟದ ಸಮಯದಲ್ಲಿ ಬೆಳಕು ನಮಗೆ ಯಾವಾಗಲೂ ಮಾರ್ಗದರ್ಶನಮಾಡುತ್ತದೆ.

ಪ್ರೀತಿ ಮತ್ತು ಪರಿಶುದ್ಧವಾದ ಉದ್ದೇಶಗಳಿಂದ ನಾವು ಬೆಳಕನ್ನು ಕ್ಷಣಮಾತ್ರದಲ್ಲಿ ಸಂಪರ್ಕಿಸಬಹುದು. ಪ್ರತಿದಿನ ಅದನ್ನು ಚಾನಲ್ ಮಾಡುವುದರ ಮೂಲಕ ಅದರ ಪ್ರಯೋಜನಗಳನ್ನು ಹರಡಬಹುದು. ಅಪ್ರೀತಿ ಮತ್ತು ಅಸಾಮರಸ್ಯದ ವಿರುದ್ಧ ಹೋರಾಡಲು ಲೈಟ್ ಚಾನಲಿಂಗ್ ಅತ್ಯುತ್ತಮ ಮಾರ್ಗ. ಸಾಮೂಹಿಕವಾಗಿ ಮಾಡುವ ಚಾನಲಿಂಗ್ ಕ್ರಾಂತಿಯನ್ನುಂಟುಮಾಡಬಲ್ಲದು.

ಪ್ರತಿದಿನ ಬೆಳಕನ್ನು ಚಾನಲ್ ಮಾಡೋಣ ಹಾಗೂ ಬದಲಾವಣೆಗಳಾಗುವುದಕ್ಕಾಗಿ ಸಹನೆಯಿಂದ ಕಾಯೋಣ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು–560077 ಭಾರತ.
ಫೋನ್ : (080) 2846 5280, 99000 75280 (10 AM to 4 PM)
ಇ–ಮೇಲ್ : info@lightagemasters.com info@lightchannels.com
ವೆಬ್‌ಸೈಟ್ : www.lightagemasters.com www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಿಲ್ಲ.

**ಬೆಂಗಳೂರು**

ಸೋಮವಾರದಿಂದ ಶುಕ್ರವಾರದವರೆಗೆ
(ಸಂಜೆ 7:00 - 7:15)
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ,
ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

ಸೋಮವಾರ (ಸಂಜೆ 6:30 - 7:00)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಬುಧವಾರ (ಸಂಜೆ 6:30 - 7:00)
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಶುಕ್ರವಾರ (ಸಂಜೆ 6:30 - 7:00)
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ,
ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ. ಭೋಸೆಕರ್

ಶನಿವಾರ (ಸಂಜೆ 5:00 - 5:30)
ಮಂಚ್‌ಕಿನ್ಸ್, ನಂ. 890,
38ನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ,
4ನೇ 'T' ಬ್ಲಾಕ್, ಜಯನಗರ
☎ 9902025444 ಶ್ರೀಮತಿ ಶುಭ ಎಸ್.

ಶನಿವಾರ (ಸಂಜೆ 6:30 - 7:00)
ಬಲಮುರಿ ಮಹಾಗಣಪತಿ,
8ನೇ ಅಡ್ಡರಸ್ತೆ,
ಹೊಯ್ಸಳ ವೃತ್ತದ ಬಳಿ,
ಕೆಂಗೇರಿ ಸೆಟಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗ ವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವ ಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ-ಮೇಲ್ info@lightagemasters.com ಗೆ ದಯವಿಟ್ಟು ಬರೆಯಿರಿ.



"15ನೇ ಮೇ 2015ರಂದು, ನಮ್ಮ ಕಾರ್ಯಕರ್ತರೊಬ್ಬರು ಸ್ನೇಹಿತರ ಮನೆಯಲ್ಲಿ ಆಯೋಜಿಸಿದ್ದ ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಬೆಳಗಾವಿಯ ತಿಲಕ್‌ವಾಡಿಯಲ್ಲಿನ ನಿವಾಸಿಗಳು ಬೆಳಕನ್ನು ಚಾನಲ್ ಮಾಡುತ್ತಿರುವುದು."

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ಇನ್ನೊಬ್ಬರ ಮಾತನ್ನು ಕೇಳಿಸಿಕೊಳ್ಳುವುದು, ಇತರರ ಅಭಿಪ್ರಾಯಗಳನ್ನು ಗೌರವಿಸುವುದು ಹಾಗೂ ಬೇರೆಯವರನ್ನು ಆತ್ಮಗಳಂತೆ ಮತ್ತು ದಿವ್ಯ ಕಣಗಳಂತೆ ಗೌರವಿಸುವುದು ಆಧ್ಯಾತ್ಮಿಕವಾಗಿದೆ.
- ಸಂಗೀತ ನಮ್ಮ ಭಾವನೆಗಳನ್ನು ಹಾಗೂ ಅಭಿವ್ಯಕ್ತಿಗಳನ್ನು ಮೃದುಗೊಳಿಸುತ್ತದೆ. ಅದು ನಮ್ಮ ಪ್ರತಿಕ್ರಿಯೆಗಳನ್ನು ಉದಾತ್ತಗೊಳಿಸುತ್ತದೆ ಹಾಗೂ ನಮ್ಮನ್ನು ದೇವರ ಹತ್ತಿರ ಕೊಂಡೊಯ್ಯುತ್ತದೆ.
- ಎಲ್ಲಾ ಕ್ರಾಂತಿಗಳು ವ್ಯಕ್ತಿಗಳಿಂದ ಆರಂಭವಾಗುತ್ತವೆ. ಒಬ್ಬ ವ್ಯಕ್ತಿ ಪರಿವರ್ತನೆಯಾದರೆ, ಅವನ ಸುತ್ತಮುತ್ತಲಿನ ಜನರ ಮೇಲೆ ಅದರ ಪ್ರಭಾವವಿರುತ್ತದೆ ಹಾಗೂ ಅವರು ಕೂಡ ಬದಲಾಗಲು ಪ್ರಾರಂಭಿಸುತ್ತಾರೆ.
- ಪ್ರಕೃತಿ ವಿಕೋಪಗಳನ್ನು ತಪ್ಪಿಸಬಹುದು. ಯಾವುದೇ ವಿಪತ್ತನ್ನು ತಡೆಯಬಹುದು, ಯುದ್ಧವನ್ನು ಕೂಡ. ಆದರೆ ಇದಕ್ಕೆ ಹೆಚ್ಚು ಜನರ ಭಾರಿ ಪ್ರಯತ್ನಗಳು ಬೇಕಾಗುತ್ತದೆ. ಅಧಿಕ ಸಂಖ್ಯೆಯಲ್ಲಿ ಜನರು ಧ್ಯಾನ ಮಾಡಬೇಕು ಹಾಗೂ ಈ ಪ್ರಪಂಚಕ್ಕೆ ಲೈಟ್ ಚಾನಲ್ ಮಾಡಬೇಕು.
- ನಮ್ಮನ್ನು ಪರಿಷ್ಕರಿಸಿಕೊಳ್ಳಲು ಜೀವನ ಒಂದು ಪ್ರಯೋಗ ಕೂಡ ಆಗಿದೆ. ನಮ್ಮ ನಡವಳಿಕೆ, ನಮ್ಮ ಶರೀರದ ಚಲನವಲನ, ಭಾವನೆಗಳು, ಆಲೋಚನೆಗಳು, ಸಂಬಂಧಗಳು, ಇತ್ಯಾದಿಗಳನ್ನು ನಾವು ಪರಿಷ್ಕರಿಸಿ ಕೊಳ್ಳಬಹುದು.
- ಪರಿಶುದ್ಧವಾಗಿರುವ ಸ್ಥಿತಿಯಲ್ಲಿ ನಕಾರಾತ್ಮಕತೆಯ ಒಂದು ಕಲೆಯೂ ಇರುವುದಿಲ್ಲ ಹಾಗೂ ಪ್ರತಿ ಭಾವನೆಯಲ್ಲಿ, ಆಲೋಚನೆಯಲ್ಲಿ ಮತ್ತು ನಮ್ಮ ಬದುಕಿನಲ್ಲಿ ಸಕಾರಾತ್ಮಕತೆ ಮಾತ್ರವೇ ತುಂಬಿರುತ್ತದೆ.
- ನಮ್ಮ ಬಳಿ ಇರುವಂತಹವುಗಳನ್ನು ನಾವು ಗುರುತಿಸುವುದಿಲ್ಲ ಹಾಗೂ ನಮಗೆ ನಿಲುಕದ ವಸ್ತುಗಳನ್ನು ನಾವು ಅಪೇಕ್ಷಿಸುತ್ತೇವೆ. ಹೇಗೋ ನಾವು ಅಸಂತೋಷವಾಗಿರಲು ಹಲವು ಕಾರಣಗಳನ್ನು ಹುಡುಕಿಕೊಂಡು ಅಸಂತೋಷವನ್ನೇ ಆಯ್ಕೆಮಾಡಿಕೊಳ್ಳುತ್ತೇವೆ.

–ಗುರೂಜಿ ಕೃಷ್ಣಾನಂದ

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | |
|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | 5014 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | 29.36 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ಬೆಳಕಿನ ಸ್ಪರ್ಶ

ಶ್ರುತಿ ಸುಧಾಕರ್, ಅನು: ಶ್ರೀದೇವಿ

ದೇವರ – ಬೆಳಕಿನ ಈ ಪ್ರಪಂಚದಲ್ಲಿ ನಾವು ಅತಿ ಚಿಕ್ಕ ಜೀವಿಗಳು.

ಬೆಳಕೇ ದೇವರು. ಬೆಳಕೇ ಚೈತನ್ಯ. ಬೆಳಕೇ ಪ್ರೀತಿ. ಬೆಳಕು ಸರ್ವವ್ಯಾಪಿ. ಬೆಳಕು ಸರ್ವಶಕ್ತ. ಬೆಳಕು ಸರ್ವಜ್ಞ.

ದೇವರ ಈ ಬೃಹತ್ತಾದ ಪ್ರಪಂಚದಲ್ಲಿ ಅತಿ ಚಿಕ್ಕ ಜೀವಿಗಳಾದ ನಾವು ಅವನ ಬೆಳಕಿನ ಕಣಗಳೂ ಕೂಡ ಆಗಿದ್ದೇವೆ. ದೇವರಲ್ಲಿರುವ ಚೈತನ್ಯವು ಅವನ ಪ್ರತಿ ಕಣದಲ್ಲೂ ಇದೆ. ದೇವರಷ್ಟೇ ನಾವು ಪರಿಶುದ್ಧರು, ಪ್ರೀತಿಯುಳ್ಳವರು ಹಾಗೂ ವಿವೇಕಿಗಳು. ನಾವು ಈಗಾಗಲೆ ಪರಿಪೂರ್ಣರು. ಇದು ನಮ್ಮ ಪವಿತ್ರ ಗ್ರಂಥಗಳಲ್ಲಿರುವ 'ಅಹಂ ಬ್ರಹ್ಮಾಸ್ಮಿ' ಎನ್ನುವ ಪುರಾತನ ಜ್ಞಾನವನ್ನು ಅನುರಣಿಸುತ್ತದೆ. ಇದು ನಮಗೆಲ್ಲರಿಗೂ ಬಹು ಪರಿಚಯವಿರುವ ಸರಳವಾದ ವಾಕ್ಯದಂತೆ ತೋರುತ್ತದೆ. ಆದರೆ ಇದನ್ನು ನಮ್ಮೊಳಗೆ ಆಳವಾಗಿ ನೆಲೆಸಲು ಅವಕಾಶಮಾಡಿಕೊಟ್ಟಾಗ ಚಿರಂತನ ಮತ್ತು ಅನಂತವಾದ ನಮ್ಮ ಸ್ವರೂಪದ ಅರಿವನ್ನು ವಿಸ್ತಾರಗೊಳಿಸಲು ನಮಗೆ ಸಾಧ್ಯವಾಗುತ್ತದೆ.

ಒಂದು ಸಲ ಇದರ ಬಗ್ಗೆ ಜ್ಞಾನೋದಯವಾದಾಗ, ಅದೊಂದು ಹೊಸ ಜೀವನದಂತೆ; ಒಂದು ಹೊಸ ಆರಂಭದಂತೆ. ಈ ಜ್ಞಾನೋದಯಕ್ಕೆ ಮುಂಚೆ ನಾವು ಏನೆಲ್ಲಾ ಆಗಿದ್ದೆವೋ ಅದು ಗಣನೆಗೆ ಬರುವುದಿಲ್ಲ. ಜೀವನ ಲವಲವಿಕೆಯಿಂದ ಕೂಡುತ್ತದೆ. ಈ ಸೃಷ್ಟಿಯಲ್ಲಿ ನಾವು ಆನಂದಮಯವಾದ ಬೆಳಕಿನ ಕಣಗಳಾಗಿ ಅನುಭವಿಸುತ್ತೇವೆ. ಅದೊಂದು ಜಾಗೃತಿ.

ಇದು ಈ ಪ್ರಪಂಚದಲ್ಲಿ ನಿಮ್ಮ ನಿಜವಾದ ಅಸ್ತಿತ್ವವನ್ನು ಮುಂದೆ ತರುತ್ತದೆ. ಆಗ ನಿಮ್ಮ ಪ್ರತಿಯೊಂದು ಆಲೋಚನೆ, ಕನಸು ಹಾಗೂ ಕಾರ್ಯ, ದೈವೀ ಯೋಜನೆಯೊಂದಿಗೆ ಹೊಂದಿಕೊಂಡಿರುತ್ತದೆ. ನಿಮಗೆ ಶಾಂತಿಯ ಅನುಭವವಾಗುತ್ತದೆ, ಆನಂದದ ಸಂವೇದನೆಯ ಮತ್ತು ಎಲ್ಲ ಸಮಯದಲ್ಲೂ ದೈವದೊಂದಿಗೆ ಸಂಪರ್ಕಗೊಂಡಿರುವ ಅನುಭವವಾಗುತ್ತದೆ. ಯಾವುದೇ ಪ್ರಯತ್ನಮಾಡದಿದ್ದರೂ ನೀವು ದೇವರಿಗಾಗಿ ಕೆಲಸ ಮಾಡುತ್ತಿರುವಿರಿ. ನೀವು ಮಾಡುವ ಪ್ರತಿಯೊಂದೂ ವರಪ್ರಸಾದವಾಗುತ್ತದೆ.

ನಾವು ಯಾರು ಎಂದು ತಿಳಿಯಲು, ಬೆಳಕಿನ ಜೀವಿಗಳು ನಮಗೆ ಮಾರ್ಗದರ್ಶಿಸುತ್ತಿದ್ದಾರೆ. ಕೆಲವರಿಗೆ ಇದರ ಜ್ಞಾನೋದಯ ಸ್ವಲ್ಪ ಪ್ರಯತ್ನದಿಂದಾಗಬಹುದು ಹಾಗೂ ಕೆಲವರಿಗೆ ಹೆಚ್ಚು ಸಮಯ ಬೇಕಾಗಬಹುದು. ಈಗ ಸಿಗುತ್ತಿರುವ ಹೊಸ ಚೈತನ್ಯಗಳ ಸಹಾಯವನ್ನು ಸ್ವೀಕರಿಸಿದ ಅನೇಕರು ಈಗಾಗಲೆ ತಮ್ಮ ನಿಜಸ್ವರೂಪವನ್ನು ಅನುಭವಿಸುತ್ತಾ ಜೀವಿಸುತ್ತಿದ್ದಾರೆ. ಒಂದು ಸಲ ನಾವು ನಿರ್ಧರಿಸಿ, ಸಹಾಯವನ್ನು ಕೇಳಿದಾಗ, ಅದು ನಮಗೆ ದೊರೆಯುತ್ತದೆ. ಆಗ ನಮ್ಮ ಆಧ್ಯಾತ್ಮಿಕ ಪಯಣ ಪ್ರಾರಂಭವಾಗುತ್ತದೆ.

ಜಾಗೃತಗೊಂಡ ಆತ್ಮಗಳು ಭವಿಷ್ಯವನ್ನು ಸ್ವಾಗತಿಸುತ್ತಾರೆ, ವರ್ತಮಾನವನ್ನು ಸ್ವೀಕರಿಸುತ್ತಾರೆ ಹಾಗೂ ತಮ್ಮ ಗತಕಾಲದೊಂದಿಗೆ ಶಾಂತಿಯಿಂದಿರುತ್ತಾರೆ. ಬೆಳಕಿನ ಜೀವಿಗಳಾದ ನಮ್ಮ ಋಷಿಗಳು ನಮಗೆ ಮಾರ್ಗದರ್ಶಿಸಲು ಹಾಗೂ ಸಹಾಯ ಮಾಡಲು ಇಲ್ಲಿದ್ದಾರೆ. ಅದ್ಭುತವಾದರೂ ಸರಳವಾದ ಈ ಲೈಟ್ ಚಾನಲಿಂಗ್ ತಂತ್ರವನ್ನು ಅವರು ನಮಗೆ ಕೊಟ್ಟಿದ್ದಾರೆ. ಈ ಸರಳ ತಂತ್ರ, ಈ ಜಾಗೃತಿಯಲ್ಲಿ ಮ್ಯಾಜಿಕ್ ಫ಼ಾರ್ಮುಲಾದಂತೆ ನಮಗೆ ಸಹಾಯ ಮಾಡುತ್ತದೆ. ಈ ತಂತ್ರದಿಂದ ನಾವು ಪ್ರತಿ ದಿನ ಬೆಳಕನ್ನು ಅನುಭವಿಸಬಹುದು. 'ಬೆಳಕು ನಮ್ಮನ್ನು ಸ್ಪರ್ಶಿಸುತ್ತದೆ ಹಾಗೂ ಬೇಗನೆ ನಾವೇ ಬೆಳಕೆಂದು ನಮಗೆ ಜ್ಞಾನೋದಯವಾಗುತ್ತದೆ'. ■

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಯಾವುದಾದರೊಂದು ಲೈಟ್ ಚಾನಲಿಂಗ್ ಕೇಂದ್ರದಲ್ಲಿ ವಾರಕ್ಕೆ ಒಮ್ಮೆ ಲೈಟ್ ಚಾನಲ್ ಮಾಡಲು ದಯವಿಟ್ಟು ನಮ್ಮ ಜೊತೆಗೂಡಿ ಹಾಗೂ ಶಾಂತಿ ಮತ್ತು ಪ್ರೀತಿಯ ಕಂಪನಗಳನ್ನು ಹರಡಲು ಮತ್ತು ಬಲಗೊಳಿಸಲು ನಮಗೆ ಸಹಾಯಮಾಡಿ. ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ದಯವಿಟ್ಟು ಈ ವಾರ್ತಾಪತ್ರವನ್ನು ಹಂಚಿಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್ ಸೈಟ್ www.lightchannels.com ನಿಂದ ಡೌನ್ ಲೋಡ್ (download) ಮಾಡಿಕೊಳ್ಳಬಹುದು.

### ಸೋಲಾಪೂರ್

ಸೋಮವಾರ ಮತ್ತು ಗುರುವಾರ
(ಸಂಜೆ 7:00 - 7:15)
ಬಾಲಗಣೇಶ್ ಮಂದಿರ, ಬುಶರ್ ಪೇಠ್, ಮೊಹೋಲ್
☎ 09860967066, ಶ್ರೀ ವಿವೇಕಾನಂದ ಸ್ವಾಮಿ
☎ 09970800279, ಶ್ರೀಮತಿ ಸ್ವರೂಪ ಸ್ವಾಮಿ

### ಚೆನ್ನೈ

ಭಾನುವಾರ (ಬೆಳಿಗ್ಗೆ 10:00 -10:30)
ನಂ. 481, ಸಾಯಿಪ್ರೇಮ್, 19 ನೇ ರಸ್ತೆ,
4ನೇ ಸೆಕ್ಟರ್, ಕೆ.ಕೆ. ನಗರ
☎ 9444880409, ಶ್ರೀಮತಿ ರಾಜಲಕ್ಷ್ಮಿ ಆರ್.

### ಪುಣೆ



ಶನಿವಾರ (ಸಂಜೆ 6:30 - 7:00)
3 B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ, ಪುಣೆ - 411016
☎ 9011038169, ಶ್ರೀ ಆಶುತೋಶ್ ನವನ್‌ಗುಲ್

ಗುರುವಾರ (ಮಧ್ಯಾಹ್ನ 2:30 - 3:00)
ಸಿಂಧಿ ಮಂದಿರ, ಸತ್ನಮ್ ಟೆಕ್ಸ್‌ಟೈಲ್ ಪಕ್ಕ,
ಶಿವಸೇನ ಕಛೇರಿಯ ಸಮೀಪ, ಉರುಲಿ ಕಾಂಚನ್,
ಹವೇಲಿ ಜಿಲ್ಲೆ, ಪುಣೆ - 412202
☎ 9822973632, ಶ್ರೀ ಗೋರಕ್ಷ್ ಮಹಾದಿಕ್


### ಮೀರಜ್

ಗುರುವಾರ (ಸಂಜೆ 7:45)
ಶ್ರೀ ಶಿವರುದ್ರ ಬಿ. ಬೆಲಗನ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
A-gat Plot No-135, ಸುಭಾಶ್ ನಗರ ಪೋಸ್ಟ್
☎ 9822421463, ಶ್ರೀ ಮಹಾಜನ್

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯಕರ್ತರ ಅನುಭವಗಳನ್ನು "Experiences of Light Channels" ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್ ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.






## ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ಲೈಟ್ ಚಾನಲಿಂಗ್ ಮಾಡುತ್ತಿರುವಾಗ ನಾನು ಬೆಳಕಿನ ಸಾಗರದಲ್ಲಿ ತೇಲುತ್ತಿರುವುದರ ಅನುಭವವಾಯಿತು.

–ಅಂಬ್ರೂನಿ ಎ, 4ನೇ ತರಗತಿ,
ಆರ್.ಎಮ್.ಎಸ್. ಇಂಟರ್‌ನ್ಯಾಷನಲ್ ಸ್ಕೂಲ್,
ಬೆಂಗಳೂರು

ಲೈಟ್ ಚಾನಲಿಂಗ್ ತಂತ್ರ ತುಂಬಾ ಸರಳವಾಗಿದೆ. ಲೈಟ್ ಚಾನಲಿಂಗ್ ಮಾಡುವಾಗ ಒಂದು ದೊಡ್ಡದಾದ ಬೆಳಕಿನ ಚೆಂಡು ನನ್ನ ದೇಹದೊಳಗೆ ಪ್ರವೇಶಿಸಿದ್ದನ್ನು ನಾನು ನೋಡಿದೆ.

–ಅಧಿಧಿ ಸಿರಿ ಬಿ.ಜೆ, 4ನೇ ತರಗತಿ,
ಆರ್.ಎಮ್.ಎಸ್. ಇಂಟರ್‌ನ್ಯಾಷನಲ್ ಸ್ಕೂಲ್,
ಬೆಂಗಳೂರು

ಲೈಟ್ ಚಾನಲಿಂಗ್ ಮಾಡುತ್ತಿರುವಾಗ ನಾನು ಭೂಮಿ ಮತ್ತು ಸೂರ್ಯನ ಮೇಲೆ ಕುಳಿತಿರುವಂತೆ ಭಾಸವಾಯಿತು. ನಂತರ ನಾನು ಒಂದು ಮರುಭೂಮಿಯಲ್ಲಿ ಇದ್ದಂತೆ ಅನಿಸಿತು. ಹಾಗೂ ನೀರಿನ ಒಳಗೆ ಹೋದಂತೆಯೂ ಅನಿಸಿತು. ಅದೊಂದು ವಿಸ್ಮಯ ಮತ್ತು ಸುಂದರ ಅನುಭವವಾಗಿತ್ತು.

–ದೀಕ್ಷಾ, 4ನೇ ತರಗತಿ,
ಆರ್.ಎಮ್.ಎಸ್. ಇಂಟರ್‌ನ್ಯಾಷನಲ್ ಸ್ಕೂಲ್,
ಬೆಂಗಳೂರು

ಲೈಟ್ ಚಾನಲಿಂಗ್ ಮಾಡುತ್ತಿರುವಾಗ ನಾನು ಒಂದು ಸುಂದರವಾದ ನವಿಲು ಮತ್ತು ಅದರ ಗರಿಗಳನ್ನು ನೋಡಿದೆನು. ಪ್ರಕಾಶಿಸುತ್ತಿರುವ ಸೂರ್ಯ ಹಾಗೂ ಪ್ರಶಾಂತವಾದ ಸಾಗರವನ್ನು ನೋಡಿದೆನು. ಸಿಂಹ, ಹುಲಿ, ಚಿರತೆ, ಮತ್ತು ಜಿಂಕೆಗಳಂತಹ ಅನೇಕ ಪ್ರಾಣಿಗಳನ್ನು ನೋಡಿದೆನು. ನನಗೆ ಅತ್ಯಾಶ್ಚರ್ಯವಾಯಿತು ಹಾಗೂ ಬಹಳ ಸಂತೋಷವಾಯಿತು.

–ರಕ್ಷಿತಾ ಕೆ ಆರ್, 4ನೇ ತರಗತಿ,
ಆರ್.ಎಮ್.ಎಸ್. ಇಂಟರ್‌ನ್ಯಾಷನಲ್ ಸ್ಕೂಲ್,
ಬೆಂಗಳೂರು

ಲೈಟ್ ಚಾನಲಿಂಗ್ ನನ್ನ ಏಕಾಗ್ರತಾ ಶಕ್ತಿಯನ್ನು ಹೆಚ್ಚಿಸಿದೆ. ಈ ಮೊದಲು ನನ್ನ ಮನಸ್ಸು ಅನಾವಶ್ಯಕವಾದ ಚಿಕ್ಕ ಚಿಕ್ಕ ವಿಷಯಗಳ ಕಡೆಗೆ ತಿರುಗುತ್ತಿತ್ತು; ಆದರೆ ಈಗ ನಾನು ಅದರ ಮೇಲೆ ಸಂಪೂರ್ಣ ಹತೋಟಿಯನ್ನು ಸಾಧಿಸಿಕೊಂಡಿದ್ದೇನೆ.

–ಸಾಕ್ಷಿ ದೀಕ್ಷಿತ್, 12ನೇ ತರಗತಿ, ಟೈನಿ ಟಾಟ್ಸ್
ಸೀನಿಯರ್ ಸೆಕೆಂಡರಿ ಸ್ಕೂಲ್, ಬಾನ್ಸ್‌ವಾರ

ಲೈಟ್ ಚಾನಲಿಂಗ್ ಮಾಡುವುದನ್ನು ಪ್ರಾರಂಭಿಸಿದ ಮೇಲೆ ನನ್ನ ಕೋಪವನ್ನು ನಿಯಂತ್ರಣದಲ್ಲಿಡಲು ಸಾಧ್ಯವಾಗಿದೆ.

–ಜಿಯ ಸಿಂಗ್ ಹಡ, 11ನೇ ತರಗತಿ,
ಟೈನಿ ಟಾಟ್ಸ್ ಸೀನಿಯರ್ ಸೆಂಕೆಂಡರಿ ಸ್ಕೂಲ್,
ಬಾನ್ಸ್‌ವಾರ

ಲೈಟ್ ಚಾನಲಿಂಗ್ ಮಾಡುವುದನ್ನು ಪ್ರಾರಂಭಿಸಿದ ಮೇಲೆ, ಕ್ಷುಲ್ಲಕ ಹಾಗೂ ಚಿಕ್ಕ ಪುಟ್ಟ ವಿಷಯಗಳಿಗೆ ಪ್ರತಿಕ್ರಿಯಿಸುವುದನ್ನು ನಿಲ್ಲಿಸಿದ್ದೇನೆ.

–ಪಾಖೀ ರಾಜ್‌ಕುಮಾರ್, 9ನೇ ತರಗತಿ, ಟೈನಿ
ಟಾಟ್ಸ್ ಸೀನಿಯರ್ ಸೆಕೆಂಡರಿ ಸ್ಕೂಲ್,
ಬಾನ್ಸ್‌ವಾರ

ಲೈಟ್ ಚಾನಲಿಂಗ್ ಮಾಡುತ್ತಿರುವಾಗ ನನ್ನ ಕಣ್ಣುಗಳ ಮುಂದೆ ನೀಲಿ ಬಣ್ಣದ ಬೆಳಕನ್ನು ನೋಡಿದೆ. ನನ್ನ ಮನಸ್ಸು ನಿರಾಳವಾಗಿತ್ತು. ನನ್ನಲ್ಲಿ ಸಂತೋಷ ಮತ್ತು ಆತ್ಮವಿಶ್ವಾಸ ಮೂಡಿತು. ನನ್ನ ಮನಸ್ಸು ನಿರ್ಮಲವಾಯಿತು. ನಾನು ಧ್ಯಾನ ಮಾಡುತ್ತಿರುವುದರಿಂದ ಏಕಾಗ್ರತೆಯಿಂದ ಓದಲು ನನಗೆ ಸಾಧ್ಯವಾಗಿದೆ. ನನ್ನ ಕನಸುಗಳು ನನಸಾಗುತ್ತಿರುವಂತೆ ಹಾಗೂ ನನ್ನ ಗುರಿಯನ್ನು ತಲುಪುತ್ತಿರುವಂತೆ ಭಾಸವಾಗುತ್ತಿದೆ.

–ಕಿಶೋರ್ ಎಸ್, 9ನೇ ತರಗತಿ, ಸರ್ಕಾರಿ
ಪಿ.ಯು. ಕಾಲೇಜ್ (ಹೈಸ್ಕೂಲ್ ವಿಭಾಗ)
ಕಾಡುಗೋಡಿ, ಬೆಂಗಳೂರು

ಲೈಟ್ ಚಾನಲಿಂಗ್ ಅಭ್ಯಾಸ ಮಾಡುತ್ತಿರುವುದರಿಂದ, ನನ್ನ ಸುತ್ತ ಮುತ್ತ ನಡೆಯುತ್ತಿರುವ ಬಹಳಷ್ಟು ವಿದ್ಯಾಮಾನಗಳನ್ನು ನೆನಪಿಟ್ಟುಕೊಳ್ಳಲು ನನಗೆ ಸಾಧ್ಯವಾಗಿದೆ. ವ್ಯಾಸಂಗದಲ್ಲಿ ಆಸಕ್ತಿ ಮೂಡಿದೆ. ನಾನು ಪ್ರತಿಯೊಂದು ಕೆಲಸವನ್ನೂ ಸಂತೋಷದಿಂದ ಮಾಡುತ್ತೇನೆ.

–ಹಿತಾರ್ಥ್ ಪಾಥಕ್, 9ನೇ ತರಗತಿ,
ಟೈನಿ ಟಾಟ್ಸ್ ಸೀನಿಯರ್ ಸೆಕೆಂಡರಿ ಸ್ಕೂಲ್,
ಬಾನ್ಸ್‌ವಾರ

ನಾನು ಲೈಟ್ ಚಾನಲಿಂಗ್ ಮಾಡುವಾಗ, ನನ್ನ ಸಮಸ್ಯೆಗಳನ್ನು ಮರೆಯುತ್ತೇನೆ. ಚಾನಲಿಂಗ್ ಮಾಡಿದ ಮೇಲೆ ನನ್ನ ಸಮಸ್ಯೆಗಳನ್ನು ನಿಭಾಯಿಸುವಲ್ಲಿ ಹೆಚ್ಚಿನ ಆತ್ಮ ವಿಶ್ವಾಸ ಮೂಡಿದೆ.

–ವತ್ಸಲ, ಶಿಕ್ಷಕಿ, ಲಿಟ್ಲ್
ಏಂಜೆಲ್ಸ್ ಇಂಗ್ಲೀಷ್ ಸ್ಕೂಲ್, ಬೆಂಗಳೂರು

ಬೆಳಕಿನ ಸಂಚಲನ ಕನ್ನಡ ಮಾಸಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು– 560077
ಮುದ್ರಣ ಸ್ಥಳ : ಗುಡ್ ಪ್ರಿಂಟ್ಸ್, ವೀಣ ಕಾಂಪ್ಲೆಕ್ಸ್, ಹಳೇ ಮದ್ರಾಸ್ ರಸ್ತೆ, ದೂರವಾಣಿನಗರ, ಬೆಂಗಳೂರು – 560 016
ಮಾಲೀಕರು : ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು – 560077 ಸಂಪಾದಕರು: ಶ್ರೀದೇವಿ